# ಸಹಕಾರದ ನೆರಳಿನಲ್ಲಿ ಆಸ್ಪತ್ರೆ



ಕಾಡಿನ ಜಿಲ್ಲೆಯಾಗಿರುವ ಉತ್ತರ ಕನ್ನಡ ನಾಡಿನ ಸೌಲಭ್ಯಗಳಿಂದ ಕೊಂಚ ದೂರವೇ ಉಳಿದಿದೆ. ಶಿಕ್ಷಣ, ಆರೋಗ್ಯದಂತಹ ಅಗತ್ಯ ಸೌಕರ್ಯಗಳಿಗೂ ನೆರೆಯ ಜಿಲ್ಲೆಗಳನ್ನು ಅವಲಂಬಿಸಿದೆ. ಗಂಭೀರ ಅಥವಾ ತುರ್ತು ಆರೋಗ್ಯ ತೊಂದರೆ ಎದುರಾದರೆ ರೋಗಿಯನ್ನು ಆಂಬುಲೆನ್ಸ್‌ನಲ್ಲಿ ಹುಬ್ಬಳ್ಳಿ ಅಥವಾ ಶಿವಮೊಗ್ಗ ಅಥವಾ ಮಣಿಪಾಲ ಅಥವಾ ಮಂಗಳೂರಿಗೇ ಕರೆದೊಯ್ಯಬೇಕು.

ಆರೋಗ್ಯ ಸೇವೆಯ ಬಿಕ್ಕಟ್ಟನ್ನು ಎದುರಿಸುತ್ತಿರುವ ಜಿಲ್ಲೆಯಲ್ಲಿ ಸಹಕಾರಿಗಳು ಮುಂದಾಗಿರುವ ಸ್ಥಾಪಿಸಿರುವ ಆಸ್ಪತ್ರೆಯೊಂದು ರೋಗಿಗಳ ಪಾಲಿಗೆ ಬೆಳಕಿನ ಗೆರೆಯಾಗಿದೆ. ಸಹಕಾರ ಚಳವಳಿ ಬಲವಾಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಆರ್ಥಿಕತೆಗೆ ಸುಭದ್ರ ನೆಲೆ ಕಲ್ಪಿಸಿದ್ದು ಸಹಕಾರ ಸಂಘಗಳು. ಈ ಸಹಕಾರ ಸಂಘಗಳಿಗೆ ನಾಯಕನಾಗಿರುವ ಶಿರಸಿಯ 'ತೋಟಗಾರ್ಸ್ ಕೋ ಆಪರೇಟಿವ್ ಸೇಲ್ ಸೊಸೈಟಿ' (ಟಿಎಸ್‌ಎಸ್) ನಿರ್ದೇಶಕರು ದೂರಾಲೋಚನೆಯಿಂದ ಒಂದೂವರೆ ದಶಕದ ಹಿಂದೆ ಆಸ್ಪತ್ರೆಯೊಂದನ್ನು ತೆರೆದಿದ್ದಾರೆ. ಈಗಲೂ ಟಿಎಸ್‌ಎಸ್ ನಿರ್ದೇಶಕರಲ್ಲಿ ಕೆಲವರು ಆಸ್ಪತ್ರೆಯ ನಿರ್ದೇಶಕರು ಕೂಡ.

ಸಹಕಾರದ ವ್ಯವಸ್ಥೆಯಲ್ಲಿ ಮೊಳಕೆಯೊಡೆದಿರುವ ತೋಟಗಾರ ಸೇವಾ ಸಮಿತಿ ಈ ಆಸ್ಪತ್ರೆಯ ಆಡಳಿತ ನಿರ್ವಹಣೆ ನಡೆಸುತ್ತದೆ. ಆದರೆ, ಈ ಆಸ್ಪತ್ರೆ ನಿರ್ಮಾತೃಗಳು ಟಿಎಸ್‌ಎಸ್ ಸದಸ್ಯರು. ಸಹಕಾರ ಸಂಘದ ಸದಸ್ಯರ ಕೊಡುಗೆಯಿಂದಲೇ ನಿರ್ಮಾಣವಾಗಿರುವ ಆಸ್ಪತ್ರೆ, ಘಟ್ಟದ ಮೇಲಿನವರ ಪಾಲಿಗೆ ಆಪದ್ಬಾಂಧವನಾಗಿದೆ.

'ಆಸ್ಪತ್ರೆಯ ಕಾರ್ಯಶೈಲಿ ಸಹಕಾರದ ನೆರಳಿನಲ್ಲಿ ನಡೆಯುತ್ತಿದೆ. ಸಹಕಾರ ವ್ಯವಸ್ಥೆ, ಖಾಸಗಿಗಿಂತ ಭಿನ್ನ. ಖಾಸಗಿ ಆಸ್ಪತ್ರೆಗಳಲ್ಲಿ ಲಾಭದ ಭಾಗ

ಆಸ್ಪತ್ರೆಯಾಗಿ ಇಂದಿಗೂ ಗುರುತಿಸಿಕೊಂಡಿದೆ. ಸೋಲಾಪುರದಲ್ಲಿನ ಅಶ್ವಿನಿ ಸಹಕಾರಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಹಾಗೂ ಸೋಲಾಪುರದ ಬಾರ್ಷಿಯಲ್ಲಿರುವ ಡಾ. ಹಿರೇಮಠ್ ಸಹಕಾರಿ ಆಸ್ಪತ್ರೆ ಕೂಡ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಕೋಲ್ಕತ್ತದ ಇಸ್ಪಾಟ್ ಮತ್ತೊಂದು ಜನಪ್ರಿಯ ಸಹಕಾರಿ ಆಸ್ಪತ್ರೆ.

ಶುಶ್ರೂಷಾ ಸಹಕಾರಿ ಆಸ್ಪತ್ರೆಯ ನಿರ್ದೇಶಕ ಡಾ. ನಂದಕಿಶೋರ್ ಎಸ್. ಲೌಡ್ ಅವರು ಆಸ್ಪತ್ರೆಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದವರು. ಜನರ ಸಹಭಾಗಿತ್ವದಲ್ಲಿ ನಡೆಯುವ ಆಸ್ಪತ್ರೆಗಳ ಮಹತ್ವವನ್ನು ಗುರುತಿಸುವ ಸಂದರ್ಭದಲ್ಲಿ ಅವರು, ಇಂದಿನ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕತೆಯನ್ನು ಪರಿಗಣಿಸುತ್ತಾರೆ. ಕುಟುಂಬ ಆದಾಯದ ಸುಮಾರು ಶೇ.10ರಿಂದ ಶೇ.12ರಷ್ಟನ್ನು ಆರೋಗ್ಯ ಸೇವೆಯ ಬಳಕೆಗಾಗಿ ಖರ್ಚು ಮಾಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಸಹಕಾರಿ ಮಾದರಿ ನೆರವಿಗೆ ಬರುತ್ತದೆ ಎನ್ನುತ್ತಾರೆ.

ಇಂಗ್ಲೆಂಡ್‌ನಲ್ಲಿ ಆರೋಗ್ಯ ಸೇವೆಯ ಹೊಣೆಯನ್ನು ಸರ್ಕಾರವೇ ವಹಿಸಿಕೊಳ್ಳುತ್ತದೆ. ಆದರೆ ಜನಸಂಖ್ಯೆ ಹೆಚ್ಚಿರುವ ಭಾರತದಂತಹ ದೇಶದಲ್ಲಿ ಸರ್ಕಾರಿ ಆಸ್ಪತ್ರೆ ಅಷ್ಟು ಬಲಿಷ್ಠವಾಗಲು ಬಹು ಸಮಯ ಬೇಕಾದೀತು. ಅಂತಹ ಸಂದರ್ಭದಲ್ಲಿ ಜನರ ಸಹಭಾಗಿತ್ವದ ಸಹಕಾರಿ ಮಾದರಿ ಹೆಚ್ಚು ಅನುಕೂಲವಾಗುತ್ತದೆ. ಸಹಕಾರಿ ಮಾದರಿ ಇದ್ದಾಗ ಹಣಕಾಸಿನ ಬಗ್ಗೆ ಹಾಗೂ ಸೌಕರ್ಯಗಳ ಬಳಕೆ ಬಗ್ಗೆಯೂ ಹೆಚ್ಚಿನ ಎಚ್ಚರಿಕೆ, ಉತ್ತರದಾಯಿತ್ವ ಇರುತ್ತದೆ ಎನ್ನುತ್ತಾರೆ ಡಾ. ನಂದಕಿಶೋರ್.



ಸಾಮಾನ್ಯವಾಗಿ ಇಂತಹ ಆಸ್ಪತ್ರೆ ಆರಂಭಿಸುವಾಗ ಆರೋಗ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರು ಬಂಡವಾಳ ಹೂಡಿಕೆ ಮಾಡುತ್ತಾರೆ. ಆದರೆ ಜನಸಾಮಾನ್ಯರಿಗೆ ಬಂಡವಾಳ ಹೂಡಿಕೆ ಮಾಡುವುದಕ್ಕೆ ಆದ್ಯತೆ ನೀಡಬೇಕು. ಲಾಭಗಳಿಕೆಯ ಉದ್ದೇಶ ಹೊಂದಿದ ಹಣವಂತರಿಗಿಂತ ಸಾಮಾನ್ಯ ಜನರಿಗೆ ಆದ್ಯತೆ ನೀಡಿದಲ್ಲಿ ಸಹಕಾರಿ ಮಾದರಿ